ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1202
ಮಾನ್ಯ ಸದಸ್ಯರ ಹೆಸರು	:	ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	07-03-2022
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 2 ವರ್ಷಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಸರ್ಕಾರದಿಂದ ಪ್ರವಾಸೋದ್ಯಮ ಇಲಾಖೆಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನವೆಷ್ಟು; (ಕ್ಷೇತ್ರಾವಾರು ಲೆಕ್ಕಶೀರ್ಷಿಕೆವಾರು ಪೂರ್ಣ ವಿವರ ನೀಡುವುದು)	ಸರ್ಕಾರದಿಂದ ಪ್ರವಾಸೋದ್ಯಮ ಇಲಾಖೆಗೆ ಜಿಲ್ಲಾವಾರು/ಕ್ಷೇತ್ರವಾರು/ ಲೆಕ್ಕಶೀರ್ಷಿಕೆವಾರು ಅನುದಾನವನ್ನು ಹಂಚಿಕೆ ಮಾಡಿರುವುದಿಲ್ಲ. ಬದಲಾಗಿ ಇಲಾಖೆಗೆ ಸರ್ಕಾರದಿಂದ ಒದಗಿಸುವ ಅನುದಾನದನ್ವಯ, ಸರ್ಕಾರದಿಂದ ಮಂಜೂರಾತಿ ನೀಡುವ ಕಾಮಗಾರಿಗಳು/ ಯೋಜನೆಗಳು/ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುದಾನ ಬಿಡುಗಡೆ ಮಾಡಲಾಗುತ್ತದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕಳೆದ 02 ವರ್ಷಗಳಲ್ಲಿ ಮಂಜೂರಾದ ಯೋಜನೆ / ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ, ವೆಚ್ಚ ಮಾಡಿರುವ ಹಾಗೂ ಬಾಕಿ ಇರುವ ಅನುದಾನದ ವಿವರಗಳನ್ನು ಅನುಬಂಧ-1 ಮತ್ತು 2 ರಲ್ಲಿ ಒದಗಿಸಿದೆ.
ಆ)	ಬಿಡುಗಡೆಯಾದ ಅನುದಾನದಲ್ಲಿ ಖರ್ಚು ಮಾಡಿರುವ ಅನುದಾನವೆಷ್ಟು: ಉಳಿದ ಅನುದಾನವೆಷ್ಟು; ತಡೆಹಿಡಿದಿರುವ ಅನುದಾನವೆಷ್ಟು; (ಕ್ಷೇತ್ರಾವಾರು ಮಾಹಿತಿ ನೀಡುವುದು)	ಖರ್ಚು ಮಾಡಿರುವ ಅನುದಾನದ ಹಾಗೂ ಉಳಿಕೆ ಅನುದಾನದ ವಿವರಗಳನ್ನು ಅನುಬಂಧ -1 ಮತ್ತು 2 ರಲ್ಲಿ ಒದಗಿಸಿದೆ. ಸದರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಯಾವುದೇ ಅನುದಾನವನ್ನು ತಡೆ ಹಿಡಿದಿರುವುದಿಲ್ಲ.
ಇ)	ತಡೆಹಿಡಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಉದ್ಭವಿಸುವುದಿಲ್ಲ.
ಈ)	ಯಾವ ಕಾಲಮಿತಿಯಲ್ಲಿ ತಡೆಹಿಡಿದಿರುವ ಅನುದಾನವನ್ನು ಬಿಡುಗಡೆ ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ.

TOR 74 TDV 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಹಾಗೂ ಪರಿಸರ ಸಚಿವರು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1202ಕ್ಕೆ

ಅನುಬಂಧ-1

ಪ್ರವಾಸೋದ್ಯಮ ಇಲಾಖೆಯಿಂದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಅಡಿ ಪರಿಶೀಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹಾಗೂ ಸಾಮಾನ್ಯ ಯೋಜನೆ ಅಡಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ವಿತರಿಸುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ಬಿಡಗುಡೆ ಮಾಡಿರುವ ಒಟ್ಟು ಅನುದಾನ ವಿವರ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಯ ಹೆಸರು	ವರ್ಷ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗ	ಒಟ್ಟು
1.	ಕೋಲಾರ	2019-20	21.00	6.00	21.00	48.00
2.		2020-21	-	-	-	-
		ಒಟ್ಟು (ಅ)	21.00	6.00	21.00	48.00
1.	ಚಿಕ್ಕಬಳ್ಳಾಪುರ	2019-20	21.00	9.00	24.00	54.00
2.		2020-21	-	-	-	-
		ಒಟ್ಟು (ಆ)	21.00	9.00	24.00	54.00
	ಒಟ್ಟು (ಅ+ಆ)		42.00	15.00	45.00	102.00

ಷರಾ: 2020-21ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ಇಲಾಖೆಯು ಹಮ್ಮಿಕೊಂಡಿರುವುದಿಲ್ಲ.

ಪ್ರವಾಸೋದ್ಯಮ ಇಲಾಖೆಯಿಂದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆ ಅಡಿ ಹಾಗೂ ಸಾಮಾನ್ಯ ಯೋಜನೆಅಡಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ, ಮೊರಾರ್ಜಿ ದೇಸಾಯಿ ಹಾಗೂ ಕ್ರೈಸ್ ವಸತಿ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಕಳಿಯುತ್ತಿರುವ ಪರಿಶೀಷ್ಟ ಜಾತಿ / /ಪರಿಶಿಷ್ಟ ಪಂಗಡದ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕಳೆದ 2 ವರ್ಷಗಳಲ್ಲಿ ಬಿಡಗುಡೆ ಮಾಡಿರುವ ಒಟ್ಟು ಅನುದಾನ ವಿವರ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಯ ಹೆಸರು	ವರ್ಷ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗ	ಒಟ್ಟು
1.	ಕೋಲಾರ	2019-20	11.83	4.34	13.47	29.64
2.		2020-21	-	-	-	-
		ಒಟ್ಟು (ಅ)	11.83	4.34	13.47	29.64
1.	ಚಿಕ್ಕಬಳ್ಳಾಪುರ	2019-20	11.86	6.09	13.47	31.42
2.		2020-21	-	-	-	-
		ಒಟ್ಟು (ಆ)	11.86	6.09	13.47	31.42
	ಒಟ್ಟು (ಅ+ಆ)		23.69	10.43	26.94	61.06

ಷರಾ: 2020-21ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಮಕ್ಕಳ ಆರೋಗ್ಯ ಹಿತದೃಷ್ಟಿಯಿಂದ ಪ್ರವಾಸ ಕಾರ್ಯಕ್ರಮ ಕೈಗೊಂಡಿರುವುದಿಲ್ಲ.

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1202 ಕ್ಕೆ ಅನುಬಂಧ-2

ಕಳೆದ ಎರಡು ವರ್ಷಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಬಂಡವಾಳ ವೆಚ್ಚ ಮತ್ತು ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆಗಳಡಿ ಮಂಜೂರಾಗಿರುವ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ಹೆಸರು	ಮಂಜೂರಾದ ವರ್ಷ/ ಯೋಜನೆ	ಅಂದಾಜು ಮೊತ್ತ	2018-19 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2019-20 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	2020-21 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ	ಬಾಕಿ (4-7-9)=10	ಷರಾ
1	2	3	4	7	8	9	10	11
	ಕೋಲಾರ ಜಿಲ್ಲೆ							
	ಶ್ರೀನಿವಾಸಪುರ ತಾಲ್ಲೂಕು							
1	ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು, ಬೈರಗಾನಪಲ್ಲಿ ಗ್ರಾಮ ಪಂಚಾಯತಿಯ ಬೈರಗಾನಪಲ್ಲಿ ಗ್ರಾಮದಲ್ಲಿನ ಪಂಜೂರಮ್ಮ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ಕಟ್ಟಡ ನಿರ್ಮಾಣ	2019-20 ಬಂಡವಾಳ ವೆಚ್ಚಗಳು	25.00	0.00	8.00	0.00	17.00	ಕಾಮಗರಿಗೆ ನಿವೇಶನವು ಇಲಾಖೆಯ ಹೆಸರಿಗೆ ಹಸ್ತಾಂತರವಾಗಬೇಕಿದೆ
2	ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು, ಮುಂಗನೂರು ಕ್ರಾಸ್ ನಲ್ಲಿರುವ ಶ್ರೀ ಶನೇಶ್ವರ ದೇವಸ್ಥಾನದ ಸಮಗ್ರ ಅಭಿವೃದ್ಧಿ ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸುವ ಕಾಮಗಾರಿ.	2019-20 ಬಂಡವಾಳ ವೆಚ್ಚಗಳು	25.00	0.00	10.00	0.00	15.00	ಕಾಮಗಾರಿ ಪ್ರಗತಿಯಲ್ಲಿದೆ, ಬಿಡುಗಡೆ ಮಾಡಿರುವ ರೂ.50.00 ಲಕ್ಷಗಳಿಗೆ ಹಣಬಳಕೆ ಪ್ರಮಾಣ ಪತ್ರ ಬರಬೇಕಿದೆ,
	ಕೋಲಾರ ತಾಲ್ಲೂಕು							
3	ಕೋಲಾರ ತಾಲ್ಲೂಕಿನಲ್ಲಿ ಇರುವ ಪ್ರಮುಖ 3 ಪ್ರವಾಸಿ ತಾಣಗಳಿಗೆ ಯಾತ್ರಿನಿವಾಸ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ.	2019-20 ಬಂಡವಾಳ ವೆಚ್ಚಗಳು	50.00	0.00	16.50	0.00	33.50	ಕಾಮಗಾರಿ ಪ್ರಾರಂಭಿಸಬೇಕಿದೆ
	2020-21ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ಯಾವುದೇ ಕಾಮಗಾರಿಗಳು ಮಂಜೂರಾಗಿರುವುದಿಲ್ಲ.							
	ಕೋಲಾರ ಜಿಲ್ಲೆ ಒಟ್ಟು ಮೊತ್ತ		100.00	0.00	34.50	0.00	65.50	
	ಚಿಕ್ಕಬಳ್ಳಾಪುರ ಜಿಲ್ಲೆ		0	0	0	0	0	
	2019-20 ಮತ್ತು 2020-21ನೇ ಸಾಲುಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಯಾವುದೇ ಕಾಮಗಾರಿಗಳು ಮಂಜೂರಾಗಿರುವುದಿಲ್ಲ.							
	ಚಿಕ್ಕಬಳ್ಳಾಪುರ ಜಿಲ್ಲೆ ಒಟ್ಟು ಮೊತ್ತ		0.00	0.00	0.00	0.00	0.00	
	ಗ್ರ್ಯಾಂಡ್ ಟೋಟಲ್		100.00	0.00	34.50	0.00	65.50	